# ಎನ್ಐಟಿಕೆಯ 10 ಮಂದಿ ಪ್ರಾಧ್ಯಾಪಕರಿಗೆ ಸ್ಥಾನ

**ಮಂಗಳೂರು:** ವಿಶ್ವದ ಅಗ್ರಮಾನ್ಯ ವಿವಿಗಳಲ್ಲಿ ಒಂದಾಗಿರುವ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾನಿಲಯವು ಪ್ರಕಟಿಸಿದ ಪ್ರಪಂಚದ ಅಗ್ರ ಶೇ.2 ವಿಜ್ಞಾನಿಗಳ ಪಟ್ಟಿಯಲ್ಲಿ ಸುರತ್ಕಲ್ ಎನ್‌ಐಟಿಕೆ (ನ್ಯಾಶನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ)ಯ ಹತ್ತು ಮಂದಿ ಪ್ರಾಧ್ಯಾಪಕರು ಸ್ಥಾನ ಪಡೆದಿದ್ದಾರೆ.

ನೆದರ್ಲ್ಯಾಂಡ್ಸ್ ಮತ್ತು ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿವಿಯಲ್ಲಿ ಪ್ರಧಾನ ಕಚೇರಿ ಹೊಂದಿರುವ ವಿಶ್ವದ ಅತಿದೊಡ್ಡ ಶೈಕ್ಷಣಿಕ ಪ್ರಕಾಶಕರಲ್ಲಿ ಒಬ್ಬರಾದ ಎಲ್ಸೆವಿಯರ್ ಸಂಗ್ರಹಿಸಿದ ಪೀರ್- ರಿವ್ಯೂಡ್ ವೈಜ್ಞಾನಿಕ ಪ್ರಕಟಣೆಗಳ ಪ್ರಮುಖ ಡೇಟಾಬೇಸ್ ದತ್ತಾಂಶವನ್ನು ಆಧರಿಸಿ ಈ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಪ್ರೊ.ಸುಭಾಷ್ ಚಂದ್ರ ಕಟ್ಟಿಮನಿ ಅವರ ಕಂಪ್ಯೂಟೇಶನಲ್ ಮೆಕ್ಯಾನಿಕ್ಸ್ ಮತ್ತು ಸ್ಮಾರ್ಟ್ ಸ್ಟ್ರಕ್ಚರ್ಸ್, ಪ್ರೊ.ಪಿ. ಜಯರಾಜ್ ಅವರ ಡೈನಾಮಿಕ್ಸ್ ಆಫ್ ಹೀಟೆಡ್ ಸ್ಟ್ರಕ್ಚರ್ಸ್ ಅಂಡ್ ಬಯೋ ಕಾಂಪೋಸಿಟ್ಸ್, ಡಾ.ಪ್ರಭು ಕೆ. ಅವರ ನೆಕ್ಸ್ಟ್ ಜನರೇಶನ್ ಸಂವಹನ ತಂತ್ರಜ್ಞಾನಗಳು, ಪ್ರೊ.ರಮೇಶ್ ಎಂ.ಆರ್. ಅವರ ಥರ್ಮಲ್ ಸ್ಪ್ರೇ ಲೇಪನಗಳು ಮತ್ತು ಮೇಲ್ಮೈ ಎಂಜಿನಿಯರಿಂಗ್, ಡಾ.ಸೈಕತ್ ದತ್ತಾ ಅವರ ಬಯೋಮಾಸ್ ಪರಿವರ್ತನೆ ಮತ್ತು ಸುಸ್ಥಿರ ರಸಾಯನಶಾಸ್ತ್ರ, ಪ್ರೊ.ಶಶಿಧರ್ ಜಿ. ಕೂಲಗುಡಿ ಅವರಿಂದ ಸ್ಪೀಚ್ ಪ್ರೊಸೆಸಿಂಗ್ ಮತ್ತು ಮಾನವ-ಕಂಪ್ಯೂಟರ್ ಸಂವಹನ, ಆರ್ಮುಗ ಪೆರುಮಾಳ್ ಡಿ. ಅವರ ಸಂಖ್ಯಾತ್ಮಕ ಸಿಮ್ಯುಲೇಶನ್ ಮತ್ತು ಕಂಪ್ಯೂಟೇಶನಲ್ ಮಾಡೆಲಿಂಗ್, ಪ್ರೊ.ಡಿ.ಕೃಷ್ಣ ಭಟ್ ಅವರ ಮೆಟೀರಿಯಲ್ ಸೈನ್ಸ್ ಮತ್ತು ಎನರ್ಜಿ ಅಪ್ಲಿಕೇಶನ್ಸ್, ಪ್ರೊ. ಅರುಣ್ ಎಂ.ಇಸ್ಲೂರ್ ಅವರ ಮೆಂಬ್ರೇನ್ ಟೆಕ್ನಾಲಜಿ ಮತ್ತು ವಾಟರ್ ಟ್ರೀಟ್‌ಮೆಂಟ್, ಪ್ರೊ.ದೇಬಶಿಶಾ ಜೆನಾ ಅವರ ಕಂಟ್ರೋಲ್ ಸಿಸ್ಟಮ್ಸ್ ಮತ್ತು ನವೀಕರಿಸಬಹುದಾದ ಇಂಧನ ಸಂಶೋಧನೆಗಳು ಈ ಸಾಧನೆಗೆ ಕಾರಣವಾಗಿವೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

Hosa Diganta, Date:01/10/24, p, no - 07